# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು 2 ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು

## ದಿನಾಂಕಃ 01 ನೇ ಜುಲೈ ಮಾಹೆ 2023

**ಉಪಸ್ಥಿತರುಃ ಶ್ರೀಮತಿ ಅನಿತಾ ಓ.ಎ.** ಬಿಎ.,ಎಲ್‌ಎಲ್‌ಎಂ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು 1 ನೇ
ಹೆಚ್ಚುವರಿ ಜೆ.ಎಂ.ಎಫ್.ಸಿ ರಾಣೇಬೆನ್ನೂರು

## ಓ.ಎಸ್.ನಂ.293/2022

ವಾದಿ : ಶ್ರೀಮತಿ ಉಮ್ಮೆಸಲ್ಮಾ ಕೋಂ ಸಾದಿಕ್ ಅಹ್ಮದ ಹಿತ್ತಲಮನಿ,
ವಯಸ್ಸುಃ 27 ವರ್ಷ, ಉದ್ಯೋಗಃ ಮನೆಗೆಲಸ,
ಸಾಃ ವೀಣಾ ಟಾಕೀಜ್ ಹತ್ತಿರ, ಇಲ್ಲಾಂಪುರ ಓಣಿ,
ತಾಃ ರಾಣೆಬೆನ್ನೂರು.

(ವಾದಿಯ ಪರವಾಗಿ ಶ್ರೀ ಎಸ್.ಜೆ.ಜೆ., ವಕೀಲರು)

## ವಿರುದ್ಧ

ಪ್ರತಿವಾದಿಗಳು: 1. ಮಾನ್ಯ ಮುಖ್ಯ ಕಾರ್ಯದರ್ಶಿಗಳು,
ಜನನ-ಮರಣ ನೋಂದಣಿ ವಿಭಾಗ,
ಬೆಂಗಳೂರು.

2. ನಗರ ಸಭಾ ಕಾರ್ಯಾಲಯ, ರಾಣೆಬೆನ್ನೂರು,
ಜನನ-ಮರಣ ನೋಂದಣಾಧಿಕಾರಿಗಳು,
ನಗರ ಸಭೆ, ರಾಣೆಬೆನ್ನೂರು, ಜಿಃ ಹಾವೇರಿ.

3. ಶ್ರೀ ವೆಂಕಟೇಶ ಹೆರಿಗೆ ಆಸ್ಪತ್ರೆ,
ರಾಣೆಬೆನ್ನೂರು, ಜಿಃ ಹಾವೇರಿ.

( ಪ್ರತಿವಾದಿ 1 ರವರ ಪರ ಮಾನ್ಯ ಎ.ಜಿ.ಪಿ.ರವರು )

( ಪ್ರತಿವಾದಿ 2 & 3 ವಿರುದ್ಧ ಏಕಪಕ್ಷೀಯ ಆದೇಶವಾಗಿರುತ್ತದೆ.)

| | |
|---|---|
| 1. ದಾವೆಯು ದಾಖಲಾದ ದಿನಾಂಕಃ | 28.11.2022 |
| 2. ದಾವೆಯ ಸ್ವರೂಪ: | ಘೋಷಣಾತ್ಮಕ ಹಾಗೂ ನಿರ್ದೇಶನಾತ್ಮಕ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ದಾವೆ |
| 3. ವಿಚಾರಣೆ ಪ್ರಾರಂಭವಾದ ದಿನಾಂಕಃ | 26.06.2023 |
| 4. ವಿಚಾರಣೆ ಮುಕ್ತಾಯವಾದ ದಿನಾಂಕಃ | 26.06.2023 |
| 5. ತೀರ್ಪು ನೀಡಿದ ದಿನಾಂಕಃ | 01.07.2023 |
| 6. ದಾವೆಯ ಒಟ್ಟು ಕಾಲಾವಧಿಃ | ವರ್ಷ ತಿಂಗಳು ದಿನಗಳು<br>00 07 03 |

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು**
**2 ನೇ ಹೆಚ್ಚುವರಿ ಜೆಎಂಎಫ್‌ಸಿ, ರಾಣೇಬೆನ್ನೂರು.**

## ತೀರ್ಪು

ಈ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ಘೋಷಣಾತ್ಮಕ ಮತ್ತು ನಿರ್ದೇಶನಾತ್ಮಕ ಆದೇಶವನ್ನು ಕೋರಿ ಸಲ್ಲಿಸಿರುತ್ತಾರೆ.

2. <u>ವಾದಿಯ ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ</u>

ವಾದಿಯ ಮಗಳು ಮಾಹೇನೂರ ತಂದೆ ಸಾದೀಕ್ ಅಹ್ಮದ್ ಹಿತ್ತಲಮನಿರವರು ದಿನಾಂಕ 12.01.2016 ರಂದು 3 ನೇ ಪ್ರತಿವಾದಿಯ ಆಸ್ಪತ್ರೆಯಲ್ಲಿ ಜನನವಾಗಿದ್ದು, 2 ನೇ ಪ್ರತಿವಾದಿಯು ಆಕೆಯ ಜನನ ಪ್ರಮಾಣ ಪತ್ರದಲ್ಲಿ ವಾದಿಯ ಹೆಸರನ್ನು ಉಮ್ಮೆಸಲ್ಮಾ ಕೋಂ ಸಾದೀಕ್ ಅಹ್ಮದ ಹಿತ್ತಲಮನಿ ಎಂದು ದಾಖಲು ಮಾಡುವ ಬದಲು ಕಣ್ತಪ್ಪಿನಿಂದ ಸಲ್ಮಾಬಾನು ಸಾದಿಖ್ ಅಹ್ಮದ್ ಹಿತ್ತಲಮನಿ ಎಂದು, ವಾದಿಯ ಮಗಳ ಹೆಸರು ಮಾಹೆನೂರ ಹಿತ್ತಲಮನಿ ಎಂಬುದರ ಬದಲಾಗಿ ಮಾಹೆನೂರ್ ಎಂದು, ವಾದಿಯ ಗಂಡನ ಹೆಸರು ಸಾಧೀಕ್ ಅಹ್ಮದ್ ಎಂಬುದರ ಬದಲಾಗಿ ಸಾದಿಕ ಅಹ್ಮದ ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ. ಸದರಿ ತಪ್ಪ ನಮೂದನೆಯು ವಾದಿಗೆ ಇತ್ತೀಚೆಗೆ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಸದರಿ ತಪ್ಪ ನಮೂದನೆಯನ್ನು ತಿದ್ದುಪಡಿ ಮಾಡಿಕೊಡಲು ಪ್ರತಿವಾದಿಗಳಿಗೆ ದಿನಾಂಕ 14.09.2022 ರಂದು ನೋಟೀಸು ನೀಡಿದ್ದು, 2 ನೇ ಪ್ರತಿವಾದಿಯು ವಾದಿಯ ಹೆಸರನ್ನು ತಿದ್ದುಪಡಿ ಮಾಡಿಕೊಡಲು ಅವಕಾಶವಿರುವುದಿಲ್ಲ ಎಂದು ಪ್ರತ್ಯುತ್ತರವನ್ನು ನೀಡಿರುತ್ತಾರೆ. ಆದುದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ.

3. ಸಮನ್ಸ್ ಜಾರಿಯಾದರೂ ಸಹಿತ ಪ್ರತಿವಾದಿಗಳು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಅವರ ವಿರುದ್ಧ ಏಕತರ್ಫಿಯ ಆದೇಶ ಮಾಡಲಾಗಿರುತ್ತದೆ.

4. ವಾದಿ ಪರ ವಕೀಲರ ವಾದ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಈ ನ್ಯಾಯಾಲಯವು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ದಾವೆಯನ್ನು ನಿರ್ಧರಿಸಲು ಈ ಕೆಳಕಂಡ ಅಂಶಗಳು ರಚಿಸಲಾಗಿರುತ್ತದೆ.

**ಅಂಶಗಳು**

1. ವಾದಿಯು ತನ್ನ ಹೆಸರು ಉಮ್ಮೆಸಲ್ಮಾ ಕೋಂ ಸಾದೀಕ್ ಅಹ್ಮದ ಹಿತ್ತಲಮನಿ, ತನ್ನ ಮಗಳ ಹೆಸರು ಮಾಹೇನೂರ ಹಾಗೂ ಗಂಡನ ಹೆಸರು ಸಾದೀಕ್ ಅಹ್ಮದ ಹಿತ್ತಲಮನಿ ಎಂದು ರುಜುವಾತಪಡಿಸುತ್ತಾರೆಯೇ ?
2. ವಾದಿಯು ಈ ದಾವೆಯಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹರೇ ?
3. ಯಾವ ಆದೇಶ ಅಥವಾ ಡಿಕ್ರಿ ?

5. ವಾದಿಯು ದಾವೆಯ ಅಂಶಗಳನ್ನು ಸಾಬೀತುಪಡಿಸುವ ಸಲುವಾಗಿ ಫ್ರಾಸಾ-1 ಎಂದು ಸಾಕ್ಷ್ಯ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿ, 10 ದಾಖಲೆಗಳನ್ನು ನಿಪಿ-1 ರಿಂದ 10 ಎಂದು ಗುರುತಿಸಿಕೊಂಡಿರುತ್ತಾರೆ.

6. ವಾದಿ ಪರ ವಾದವನ್ನು ಆಲಿಸಲಾಯಿತು, ಈ ದಾವೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ 1 :- ಸಕಾರಾತ್ಮಕವಾಗಿ**
**ಅಂಶ 2 :- ಸಕಾರಾತ್ಮಕವಾಗಿ**
**ಅಂಶ 3 :- ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ**

## ಕಾರಣಗಳು

7. **ಅಂಶ 1 ಮತ್ತು 2 :-** ಈ ಎರಡೂ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

8. ವಾದಿಯು ತನ್ನ ಮಗಳ ಜನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ತನ್ನ ಹೆಸರು, ತನ್ನ ಮಗಳ ಹೆಸರು ಹಾಗೂ ಗಂಡನ ಹೆಸರನ್ನು ತಪ್ಪಾಗಿ ನಮೂದು ಮಾಡಿದ್ದು, ಸದರಿ ತಪ್ಪು ನಮೂದನೆಯನ್ನು ತಿದ್ದುಪಡಿ ಮಾಡಬೇಕೆಂದು 2 ನೇ ಪ್ರತಿವಾದಿಗೆ ಮನವಿ ಸಲ್ಲಿಸಿದರೂ ಸಹಿತ ತಿದ್ದುಪಡಿ ಮಾಡಿದಿರುವುದಿಲ್ಲ ಎಂಬುದಾಗಿರುತ್ತದೆ.

9. ವಾದಿಯು ತನ್ನ ನಿಲುವನ್ನು ರುಜುವಾತುಪಡಿಸುವ ಸಲುವಾಗಿ ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಫ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು 10 ದಾಖಲೆಗಳನ್ನು ನಿಪಿ-1 ರಿಂದ 10 ಎಂದು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ. ಅವುಗಳೆಂದರೆ, ದಿನಾಂಕ 09.07.2022 ರಂದು 2 ನೇ ಪ್ರತಿವಾದಿಗೆ ನೀಡಿದ ಮನವಿ ಪತ್ರ ನಿಪಿ-1 ಎಂದು, ಪ್ರತಿವಾದಿ 2 ರವರು ನೀಡಿದ ಹಿಂಬರಹವನ್ನು ನಿಪಿ-2 ಎಂದು, ವಾದಿಯ ಮಗಳ ಜನನ ಪ್ರಮಾಣ ಪತ್ರ, ಮೂರು ಆಧಾರ್ ಕಾರ್ಡ್‌ಗಳು ಹಾಗೂ ಶಾಲಾ ವರ್ಗಾವಣೆ ಪ್ರಮಾಣ ಪತ್ರದ ನೋಟರೈಸ್ಡ್ ಪ್ರತಿಗಳನ್ನು ಕ್ರಮವಾಗಿ ನಿಪಿ-3 ರಿಂದ 7 ಎಂದು, ಮೂರು ಅಂಚೆ ರಸೀದಿಗಳನ್ನು ಒಟ್ಟಾಗಿ ನಿಪಿ-8 ಎಂದು, ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ-9 ಎಂದು ಹಾಗೂ 2 ನೇ ಪ್ರತಿವಾದಿ ನೀಡಿದ ಪ್ರತ್ಯುತ್ತರ ಪತ್ರವನ್ನು ನಿಪಿ-10 ಆಗಿರುತ್ತದೆ.

10. ನಿಪಿ-3ರ ಜನನ ಪ್ರಮಾಣ ಪತ್ರದಲ್ಲಿ ವಾದಿಯ ಹೆಸರು ಸಲ್ಮಾಬಾನು ಸಾದಿಖ್ ಅಹ್ಮದ್ ಎಂದು, ವಾದಿಯ ಮಗಳ ಹೆಸರು ಮಾಹೆನೂರ್ ಹಾಗೂ ವಾದಿಯ ಗಂಡನ ಹೆಸರು ಸಾದಿಕ್ ಅಹ್ಮದ ಮೆಹಬೂಬಸಾಬ ಹಿತ್ತಲಮನಿ ಎಂದು ನಮೂದಾಗಿರುವುದು ಕಂಡುಬರುತ್ತದೆ. ನಿಪಿ -4 ರಿಂದ 7 ಆಧಾರ್ ಕಾರ್ಡ್ ಹಾಗೂ ಶಾಲಾ ವರ್ಗಾವಣೆ ಪ್ರಮಾಣ ಪತ್ರಗಳಲ್ಲಿ ವಾದಿಯ ಹೆಸರು ಉಮ್ಮೆಸ್ಲ್ಮಾ, ವಾದಿಯ ಮಗಳ ಹೆಸರು ಮಹೇನೂರ ಎಸ್. ಹಿತ್ತಲಮನಿ ಹಾಗೂ ವಾದಿಯ ಗಂಡನ ಹೆಸರು ಸಾದೀಕ್ ಅಹ್ಮದ್ ಮಹೆಬೂಬ್ ಸಾಬ ಹಿತ್ತಲಮನಿ ಎಂದು ನಮೂದಾಗಿರುವುದು ಕಂಡುಬರುತ್ತದೆ. ನಿಪಿ-4 ರಿಂದ 7ರ ದಾಖಲೆಗಳ ಪ್ರಕಾರ ವಾದಿಯು ತನ್ನ ಹೆಸರು ಉಮ್ಮೆಸ್ಲ್ಮಾ, ತನ್ನ ಮಗಳ ಹೆಸರು ಮಹೇನೂರ ಹಾಗೂ ತನ್ನ ಗಂಡನ ಹೆಸರು ಸಾಧೀಕ್ ಅಹ್ಮದ್ ಎಂದು ಸಾಬೀತುಪಡಿಸಿರುತ್ತಾರೆ. ನಿಪಿ-2 ಮತ್ತು 10ರ ಹಿಂಬರಹ ಹಾಗೂ ಪ್ರತ್ಯುತ್ತರ ಪತ್ರಗಳಲ್ಲಿ ಸದರಿ ತಪ್ಪು ನಮೂದನೆ ಆಗಿರುವುದನ್ನು 2 ನೇ ಪ್ರತಿವಾದಿಯು ಒಪ್ಪಿಕೊಂಡಿರುತ್ತಾರೆ. ಆದುದರಿಂದ ವಾದಿಯ ಮಗಳ ಶೈಕ್ಷಣಿಕ ಭವಿಷ್ಯದಲ್ಲಿ ಆಗುವ ಅನ್ಯತಾ ತೊಡಕುಗಳ ನಿವಾರಣೆಗಾಗಿ ನಿಪಿ-3ರ ಜನನ ಪ್ರಮಾಣ ಪತ್ರದಲ್ಲಿ ತಪ್ಪಾಗಿ ನಮೂದಾಗಿರುವ ಹೆಸರುಗಳನ್ನು ತಿದ್ದುಪಡಿ ಮಾಡುವಂತೆ ನಿರ್ದೇಶಿಸುವುದು ಸೂಕ್ತವಾಗಿರುತ್ತದೆ. ಆದುದರಿಂದ ಅಂಶ 1 ಮತ್ತು 2 **ರ ಅಂಶಗಳಿಗೆ ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

11. **ಅಂಶ** 3 :- ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಆದೇಶ**

ವಾದಿಯು ಸಲ್ಲಿಸಿರುವ ಈ ದಾವೆಯನ್ನು ಡಿಕ್ರಿ ಮಾಡಲಾಗಿದೆ.

ವಾದಿಯ ಹೆಸರನ್ನು **ಉಮ್ಮೆಸ್ಲ್ಮಾ ಕೋಂ ಸಾದೀಕ್ ಅಹ್ಮದ ಹಿತ್ತಲಮನಿ**, ವಾದಿಯ ಮಗಳ ಹೆಸರನ್ನು **ಮಾಹೇನೂರ ಎಸ್. ಹಿತ್ತಲಮನಿ** ಹಾಗೂ ವಾದಿಯ ಗಂಡನ ಹೆಸರು **ಸಾದೀಕ್ ಅಹ್ಮದ್ ಮೆಹಬೂಬಸಾಬ್ ಹಿತ್ತಲಮನಿ** ಎಂದು ಘೋಷಿಸಲಾಗಿದೆ.

ಪ್ರತಿವಾದಿಗಳು ವಾದಿಯ ಮಗಳ ಜನನ ಪ್ರಮಾಣ ಪತ್ರದಲ್ಲಿ ವಾದಿಯ ಹೆಸರು **ಉಮ್ಮೆಸ್ಲ್ಮಾ ಕೋಂ ಸಾದೀಕ್ ಅಹ್ಮದ ಹಿತ್ತಲಮನಿ**, ವಾದಿಯ ಮಗಳ ಹೆಸರನ್ನು **ಮಾಹೇನೂರ ಎಸ್. ಹಿತ್ತಲಮನಿ** ಹಾಗೂ ವಾದಿಯ ಗಂಡನ ಹೆಸರು **ಸಾದೀಕ್ ಅಹ್ಮದ್ ಮೆಹಬೂಬಸಾಬ್ ಹಿತ್ತಲಮನಿ** ಎಂದು ತಿದ್ದುಪಡಿ ಮಾಡಲು ಈ ನ್ಯಾಯಾಲಯವು ಆದೇಶಿಸಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ತೀರ್ಪಿನಂತೆ ಡಿಕ್ರಿ ಬರೆಯಿರಿ .

*( ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ಕೊಟ್ಟನಂತರ ಅವರು ಮೂಲಕ ಲಿಪ್ಯಂತರ ಮಾಡಿದ ಬಳಿಕ ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿಈ ದಿನ ಅಂದರೆ ದಿನಾಂಕ* ***01 ನೇ ಜುಲೈ 2023*** *ರಂದು ಘೋಷಿಸಿದ್ದೇನೆ.)*

**(ಅನಿತಾ ಓ.ಎ)**
**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು**
**2 ನೇ ಹೆಚ್ಚುವರಿ ಜೆಎಂಎಫ್‌ಸಿ, ರಾಣೇಬೆನ್ನೂರು.**

## ಅನುಬಂಧ

**ವಾದಿಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಫಿರ್ಯಾ 1 : ಉಮ್ಮೆಸಲ್ಮಾ ಹಿತ್ತಲಮನಿ

**ವಾದಿಯ ಪರ ಗುರ್ತಿಸಲ್ಪಟ್ಟ ದಾಖಲೆಗಳ ಪಟ್ಟಿ:**

ನಿಪಿ 1 : 2 ನೇ ಪ್ರತಿವಾದಿಗೆ ನೀಡಿದ ಮನವಿ ಪತ್ರ
ನಿಪಿ 2 : ಹಿಂಬರಹ
ನಿಪಿ 3 : ಜನನ ಪ್ರಮಾಣ ಪತ್ರ
ನಿಪಿ 4 : ವಾದಿಯ ಆಧಾರ್ ಕಾರ್ಡ್
ನಿಪಿ 5 : ವಾದಿಯ ಮಗಳ ಆಧಾರ್ ಕಾರ್ಡ್
ನಿಪಿ 6 : ವಾದಿಯ ಗಂಡನ ಆಧಾರ್ ಕಾರ್ಡ್
ನಿಪಿ 7 : ವರ್ಗಾವಣೆ ಪ್ರಮಾಣ ಪತ್ರ
ನಿಪಿ 8 : ಅಂಚೆ ರಸೀದಿಗಳು
ನಿಪಿ 9 : ನೋಟೀಸಿನ ಕಚೇರಿ ಪ್ರತಿ
ನಿಪಿ 10 : 2 ನೇ ಪ್ರತಿವಾದಿ ನೀಡಿದ ಪ್ರತ್ಯುತ್ತರ

**ಪ್ರತಿವಾದಿಗಳ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

---ಇಲ್ಲ---

**ಪ್ರತಿವಾದಿಗಳ ಪರ ಗುರ್ತಿಸಲ್ಪಟ್ಟ ದಾಖಲೆಗಳ ಪಟ್ಟಿ:**

---ಇಲ್ಲ---

Sd/-
**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು**
**2 ನೇ ಹೆಚ್ಚುವರಿ ಜೆಎಂಎಫ್‌ಸಿ, ರಾಣೇಬೆನ್ನೂರು.**